Sri K. LAKKAPPA.—In view of the misappropriation committed out of the amount collected by way of share amount, will the Government appoint a Secretary on payment of salary ?

Mr. SPEAKER.—Why give some data ?

Sri K. LAKKAPPA.—In view of the allegations ?

Mr. SPEAKER.—Where and by whom ? Allegations made in the thin air ?

Sri K. LAKKAPPA.—I now make it on the floor of the House that the share amount has been swallowed and the grant has not been sanctioned.

Sri K. PUTTASWAMY.—Now that the Hon'ble Member is making an allegation on the floor of the House. I think it deserves consideration. The allegation deserves being looked into.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಿಪಟೂರು ತಾಲ್ಲೂಕ್ ಹರಿಜನ ಸಂಘ ಗೃಹ ನಿರ್ಮಾಣ ಸಂಘದ ಸೆಕ್ರೆಟರಿಯವರ ಮೇಲೆ ತಮಗೆ ಇದುವರೆಗೆ ಎಷ್ಟು ದೂರುಗಳು ಬಂದಿವೆಯೇ ? ತಮಗೆ ದೂರು ಕೊಟ್ಟಿದ್ದರಲ್ಲವೇ ? ಪೋಲೀಸಿನವರಿಗೂ ದೂರು ಸಲ್ಲಿಸಿದ್ದಾರೆ. ತನಿಖೆಮಾಡಿಯೆಂದರೆ ಅವರು ಏನೇನೂ ಮಾಡಲಿಲ್ಲ.

Mr. SPEAKER.—If it has gone to the Police, I disallow.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನೂ ಏನೂ ಮಾಡಲಿಲ್ಲ.

Mr. SPEAKER.—Is it sub-judice ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಇನ್ನೂ ಗಮನಕ್ಕೆ ತೆಗೆದುಕೊಂಡಿಲ್ಲ ? ಖೂನಿ ಏನೂ ಆಗಿಲ್ಲ. ಕಡಿದು ಹಾಕಿದರೆ ಮಾತ್ರ ಪೋಲಿಸಿನವರು ಆಕ್ಷನ್ ತೆಗೆದುಕೊಳ್ಳುತ್ತಾರೆ.

Mr. SPEAKER.—Let the Hon'ble Member give thereference of the complaint.

Sri K. P. REVANNASIDDAPPA.—I will give.

Sri G. V. GOWDA.—Does the Hon'ble Minister consder the desirability of appointing officials as Secretaries to these Socieiies ?

Sri K. PUTTASWAMY.—That question will be considered when we are in a position to release amounts.

Sri K. LAKKAPPA.—Is it not a fact that I have given a complaint relating to Tiptur Harijan Co-operative House Building Society ?

Sri K. PUTTASWAMY.—The main question relates to Tumkur Taluk. Therefore, I can answer questions relating to Tumkur. For information relating to other Taluks, I would require the Hon'ble Members to give notice.

General Hostel Building at Bangalore.

*Q.—112. Sri ANDANAIAH (Kunigal).—

Will the Government be pleased to state :—

(*a*) when the construction of the General Hostel building at Bangalore was completed ;

(*b*) the purpose for which the above building was constructed ;

(*c*) whether it is a fact that the students of the Bangalore University are representing the authorities continuously to provide boarding and lodging facilities in the above building;

(*d*) whether the authorities have taken any decision in this behalf?

A.—**Sri VEERENDRA PATIL** (Minister for Public Works).—

(*a*) In 1958.

(*b*) The building was constructed for providing accommodation to 150 students.

(*c*) No.

(*d*) Does not arise in view of reply to clause (*c*) above.

ಶ್ರೀ ಅಂದಾನಯ್ಯ.—ಈ ಜನರಲ್ ಹಾಸ್ಟರ್ ಕಟ್ಟಡ ಕಟ್ಟಿ ಏಳು ವರ್ಷವಾದರೂ, ಬೆಂಗಳೂರಿನಲ್ಲಿ ಅನೇಕ ಜನ ವಿದ್ಯಾರ್ಥಿಗಳಿಗೆ ವಸತಿಗೆ ಅವಕಾಶವಿಲ್ಲವೆ ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

Sri G. B. SHANKAR RAO (Parliamentary Secretary to the Minister for Public Works).—This Guest House is mainly meant for the Government servants who come to Bangalore for attending meetings.

ಶ್ರೀ ಅಂದಾನಯ್ಯ.—ಸ್ವಾಮಿ, ಈಗ ಉತ್ತರವಾಗಿ ಹೇಳಿದ್ದೀರಿ—150 ವಿದ್ಯಾರ್ಥಿಗಳಿಗೆ ವಸತಿಅವಕಾಶವನ್ನು ಒದಗಿಸಲು ಈ ಕಟ್ಟಡವನ್ನು ನಿರ್ಮಿಸಲಾಯಿತೆಂದು; ಆದರೆ ಈಗ ತಾವು ಹೇಳುತ್ತೀರಿ, ಅದು ಗೌರ್ನಮೆಂಟ್ ಸರ್‌ವೆಂಟ್ಸ್‌ಗೆ ಎಂದು, ಈ ಉತ್ತರದಲ್ಲಿ ಯಾವುದು ಸರಿ, ಯಾವುದು ತಪ್ಪು?

ಶ್ರೀ ಜಿ. ಬಿ. ಶಂಕರರಾವ್.—ನಾನು ಹೇಳಿದ್ದು ಸರಿ.

ಶ್ರೀ ಅಂದಾನಯ್ಯ.—ಈ ಕಟ್ಟಡವನ್ನು ಕಟ್ಟಿದ್ದು ವಿದ್ಯಾರ್ಥಿಗಳಿಗೋಸ್ಕರ. ಈಗ ತಾವು ಹೇಳುವುದು ಅಪದ್ಧವೋ ಸರಿಯೋ?

(ಉತ್ತರವಿಲ್ಲ.)

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸರ್ಕಾರಿ ಕಾಗದ ಪತ್ರಗಳು ಏಳಿಂಬವಾಗುತ್ತಿವೆ ತಮ್ಮ ಆಫೀಸುಗಳಲ್ಲಿ, ಈ ಬಗ್ಗೆ ಆ ವಿದ್ಯಾರ್ಥಿಗಳಿಗೆ ಏನಾದರೂ ಟ್ರೈನಿಂಗ್ ಕೊಡುವುದಕ್ಕೋಸ್ಕರ ಈ ಒಂದು ಹಾಸ್ಟರ್ ತೆರೆದಿದ್ದರೋ? ಅದರ ಉದ್ದೇಶವಾದರೂ ಏನು?

ಅಧ್ಯಕ್ಷರು.—ಇದು ಸಪ್ಲಿಮೆಂಟರಿಯಲ್ಲ. It is a good deal of commentary.

Sri K. S. SURYANARAYANA RAO.—It is stated in the answer that the hostel has to serve the purpose of accommodating 150 students. When did the Government take a decision to give it to other purposes a building solely meant for students?

ಶ್ರೀ ವೀರೇಂದ್ರ ಪಾಟೀಲ್.—ಈ ಜನರಲ್ ಹಾಸ್ಟಲನ್ನು ಹುಡುಗರಿಗೆ ಎಂದು ಕಟ್ಟಿಸಿದ್ದು, ಆದರೆ 1956ರಲ್ಲಿ ನಮ್ಮ ಸ್ಟೇಟ್ ದೊಡ್ಡದಾದಮೇಲೆ ಅನೇಕ ಇಂಟಿಗ್ರೇಟೆಡ್ ಏರಿಯಾದಿಂದ ಬರುವ ಹೋಗುವ ಅನೇಕ ಆಫಿಸರ್‌ಗಳಿಗೆ ಇಳಿದುಕೊಳ್ಳುವುದಕ್ಕೆ ಬಹಳ ಅನಾನುಕೂಲವಾಗುತ್ತಿತ್ತು. ಮತ್ತು ಅಸೆಂಬ್ಲಿ ಮತ್ತು ಕೌನ್ಸಿಲ್ ಸದಸ್ಯರ ಸಂಖ್ಯೆ ಹೆಚ್ಚಾಯಿತು. ಈ ಕಟ್ಟಡ ವಿಧಾನಮಂಡಲಕ್ಕೆ ಸಮೀಪ ಇರುತ್ತದೆ ಮತ್ತು ಶಾಸಕರಿಗೆ ಮತ್ತು ಆಫೀಸರ್‌ಗಳಿಗೆ ಅಲ್ಲಿ ಇರುವುದಕ್ಕೆ ಸಾಕಷ್ಟು ಅನೂಕೂಲವಾಗುತ್ತದೆಯೆಂದು ತಿಳಿದುಕೊಂಡು ಈ ಹಾಸ್ಟಲ್‌ನ್ನು ಅವರಿಗಾಗಿ ಉಪಯೋಗಿಸುತ್ತಿದೆ. ಈ ಕಟ್ಟಡವನ್ನು ಗೆಸ್ಟ್ ಹೌಸ್ ಆಗಿ ಪರಿವರ್ತನೆ ಮಾಡಿದುದು 2-11-60ರ ಸರ್ಕಾರಿ ಹುಕುಮ್‌ನಲ್ಲಿ, ಅದು ಜಾರಿಯಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ವಿದ್ಯಾರ್ಥಿಗಳ ಹಾಸ್ಟಲಗೋಸ್ಕರ ಇದ್ದ ಕಟ್ಟಡವನ್ನು ತಮ್ಮ ಅಧಿಕಾರಿಗಳು ಇಳಿಮುಕೊಳ್ಳುವುದಕ್ಕೆ, ಕೊಟ್ಟಿರುವುದರಿಂದ ವಿದ್ಯಾರ್ಥಿಗಳಿಗೆ ತುಂಬ ತೊಂದರೆ ಆಗುತ್ತಿದೆ. ಆದರಿಂದ ಅವರಿಗೆ ಒಂದು ಬೇರೆ ಹಾಸ್ಟರ್ ಕಟ್ಟಿಸುವುದಕ್ಕೆ ನಿವೇಶನ ತೆಗೆದುಕೊಂಡಿದ್ದೀರಾ ? ವಿದ್ಯಾರ್ಥಿಗಳಿಗೆ ಬೇರೆ ಹಾಸ್ಟರ್ ಕಟ್ಟಡ ಕೊಡುವುದಕ್ಕೆ ಏನಾದರು ಪ್ರಯತ್ನ ಮಾಡಿದಿರಾ ?

ಶ್ರೀ ವೀರೇಂದ್ರ ಪಾಟೀಲ್.—ಇನ್ನೊಂದು ಹಾಸ್ಟರ್ ಮಾಡುವುದರ ಬಗ್ಗೆ ಏನೂ ಗೊತ್ತಿಲ್ಲ, ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ.—ಈಗ ವಿದ್ಯಾರ್ಥಿಗಳಿಗೆ ಸಾಕಷ್ಟು ಸ್ಥಳಾವಕಾಶವಿಲ್ಲವೆಂದು ಈಗಾಗಲೆ ಸರ್ಕಾರದವರಿಗೆ ಅನೇಕ ಮನವಿಗಳು ಬಂದಿರುವುದರಿಂದ ಈ ಹಾಸ್ಟಲ್‌ನ್ನು ಸರ್ಕಾರದವರು ವಹಿಸಿಕೊಂಡಿರುವುದರ ಬದಲಾಗಿ ಒಂದು ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಯೆ ?

Sri VEERENDRA PATIL.—It is a suggestion for action.

Sri K. S. SURYANARAYANA RAO.—Will the Government consider a proposal to construct a separate building for guests and officers instead of taking over the Hostel ?

Sri VEERENDRA PATIL.—In view of the emergency at present, there is no proposal to construct a separate building.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಾಸಕರಿಗೆ ತಾತ್ಕಾಲಿಕವಾಗಿ ಸ್ಥಳಾವಕಾಶ ಮಾಡಿಕೊಟ್ಟಿದೆಯೆಂದು ಈಗ ತಾನೆ ಮಂತ್ರಿಗಳು ಹೇಳಿದರು ! ಶಾಸಕರ ಸಂಖ್ಯೆ ಕೂಡ 1967 ಎಲೆಕ್ಷನ್ ನಂತರ ಹೆಚ್ಚು ಸಂಖ್ಯೆಯಾಗುತ್ತದೆ. ಈಗಾಗಲೆ ಅನಾನುಕೂಲವಿರುತ್ತದೆ. ಆದ್ದರಿಂದ ಶಾಸಕರಿಗೆ ಸಾಕಾದಷ್ಟು ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಏನಾದರೂ ಏರ್ಪಾಡು ಮಾಡಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಜನರಲ್ ಹಾಸ್ಟಲನ್ನು ಗೆಸ್ಟ್ ಹೌಸ್ ಮಾಡಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಅದರಂತೆ ಗೌರ್ವಮೆಂಟ್ ಆರ್ಡರ್ ಆಗಿದೆ. ಆದ್ದರಿಂದ ಅದು ಮತ್ತೆ ಜನರಲ್ ಹಾಸ್ಟರ್ ಆಗುವ ಪ್ರಶ್ನೆ ಉದ್ಭವವಾಗುವುದಿಲ್ಲ.

Sri S. RAJAGOPAL.—Apart from using it during Session time, what is the use of that building ?

Sri VEERENDRA PATIL.—It is meant for officers. Whenever they come here from outside, they stay in this building.

ಶ್ರೀ ಅಂದಾನಯ್ಯ.—ಮಾನ್ಯ ಮಂತ್ರಿಗಳು ಈಗಾಗಲೆ ಅಪ್ಪಣೆ ಕೊಡಿಸಿದರು, ಈ ಕಟ್ಟಡ ಕಟ್ಟಿದ್ದು ವಿದ್ಯಾರ್ಥಿಗಳಿಗೆ ಎಂದು, ಆದರೆ ಇದನ್ನು ಉಪ-ಮಂತ್ರಿಗಳ ಮಕ್ಕಳ ಲಗ್ನ ಮಾಡುವುದಕ್ಕೆ ಉಪಯೋಗ ಮಾಡಿದೆ, ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆ ?

ಶ್ರೀ ವೀರೇಂದ್ರ ಪಾಟೀಲ್.—ಮಂತ್ರಿಗಳ ಮಕ್ಕಳ ಲಗ್ನಕ್ಕೆ ಉಪಯೋಗ ಮಾಡಿದ್ದಾರೆಂಬ ಸಂಗತಿ ನನಗೆ ಗೊತ್ತಿಲ್ಲ. ಯಾವ ಮಂತ್ರಿಗಳ ಮಕ್ಕಳ ಲಗ್ನಕ್ಕೆ ಅವನ್ನು ತೆಗೆದುಕೊಂಡಿದ್ದರೆನ್ನುವುದು ನನಗೆ ಗೊತ್ತಿಲ್ಲ. ಕೆಲವು ಜನರು ಬಂದು ಆ ಹಾಸ್ಟರ್ ಖಾಲಿ ಇವೆ, ತಮ್ಮ ಮಕ್ಕಳ ಲಗ್ನಕ್ಕೆ ಕೊಡಿ ಎಂದು ಕೇಳಿದಾಗ ಬಹುಶಃ ಮಂತ್ರಿಗಳಿಗೇ ಆರ್ಡಾ, ಮತ್ತೆ ಕೆಲವರಿಗೂ ಕೊಟ್ಟಿದೆ. ಈ ರೀತಿ ಕೆಲವು ಸಾರಿ ಕೊಟ್ಟಿದೆ.

ಶ್ರೀಮತಿ ಬಿ. ಎಸ್. ಸುಬ್ಬಮ್ಮ.—ಮೈಸೂರು ದೇಶದ ನಾನಾ ಜಿಲ್ಲೆಗಳಿಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ಈ ಹಾಸ್ಟಲ್‌ಗೆ ಬರುತ್ತಾರೆ. ಏಕೆಂದರೆ ಇದು ದೇಶದ ಮುಖ್ಯ ಸ್ಥಳವಾಗಿದೆ. ಆದ್ದರಿಂದ ಈ ಹಾಸ್ಟರ್‌ನ್ನು ವಿದ್ಯಾರ್ಥಿಗಳಿಗಾಗಿಯೇ ಮೀಸಲಾಗಿಟ್ಟು ಶಾಸಕರಿಗೆ ಇನ್ನೊಂದು ಕಟ್ಟಡವನ್ನು ಕಟ್ಟತಕ್ಕಂಥ ಯೋಚನೆ ಮಾಡುತ್ತಾರೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಉತ್ತರ ಕೊಟ್ಟಿದೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಶಾಸನ ಸಭೆಗಳು ನಡೆಯದೇ ಇರುವಾಗ ಈ ಜನರಲ್ ಹಾಸ್ಟಲ್‌ನಲ್ಲಿ ಶಾಸಕರಿಂದ 4 ರೂಪಾಯಿ ತೆಗೆದುಕೊಳ್ಳುತ್ತೀರಿ ! ಆಫೀಸರ್‌ಗಳು ಬಂದರೆ ಒಂದೂವರೆ ರೂಪಾಯಿ ತೆಗೆದುಕೊಳ್ಳುತ್ತೀರಿ. ಈ ರೀತಿ ಮಾಡುವುದರಿಂದ ಶಾಸಕರಿಗೆ ಅನ್ಯಾಯವಾಗುವುದಿಲ್ಲವೆ, ಒಂದೇ ಯೂನಿಫಾರಮ್ ರೇಟ್ ಮಾಡಬೇಕಲ್ಲವೆ !

ಶ್ರೀ ವೀರೇಂದ್ರ ಪಾಟೀಲ್.—ಶ್ರೀಮಾನ್ ಕೇಶವಮೂರ್ತಿಯವರು ಇವತ್ತು ಸಭೆಯಲ್ಲಿ ಹೇಳಿದ್ದಾರೆ; ಬಹುಶಃ ಬರದಿದ್ದರೆ ವಿಚಾರ ಮಾಡಬಹುದಾಗಿತ್ತು.

Mr. SPEAKER.—Question hour is over.

QUESTION FOR ANSWER ON THE DAY

(but not taken up).

Constructing a Government General Hostel.

*Q.—237. Sri T. D. DEVENDRAPPA (Bhadravathi).—

Will the Government be pleased to state :—

(*a*) whether it is a fact that the Deputy Commissioner has sent to Government an estimate of Rupees 85,000 for the construction of Government General Hostel for the boys and girls of Government High School, Kallihal in Holehonnur Hobli, Bhadravathi Taluk, for sanction;

(*b*) when the said estimate was sent;

(*c*) whether they would sanction the estimate immediately and arrange to construct the General Hostel building at least now?

*A.—Sri S. R. KANTHI (Minister for Education).—

(*a*) No.

(*b*) and (*c*) Does not arise.

Mr. SPEAKER.—Starred Question No. 11. Sri Basappa may put it.

Sri M. C. BASAPPA.—Today the Hon'ble Minister is not present.

Mr. SPEAKER.—It will be a held over question.

Member's Representation.

Sri K. LAKKAPPA (Hebbur).—Veterinary College boys ಮುಷ್ಕರ ಹೂಡಿರುವ ಬಗ್ಗೆ ಮತ್ತು ಕಾರ್ಪೊರೇಟರುಗಳು ಉಚಿತ ನೀರಿನ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡಿರುವ ವಿಷಯದಲ್ಲಿ ನಾನು ಕಾಲ್-ಅಟೆನ್‌ಷನ್ ನೋಟೀಸನ್ನು ತಮಗೆ ಕೊಟ್ಟಿದ್ದೆ.

Mr. SPEAKER.—If the Hon' ble Member gives time, he will know whether it is admitted. He does not care to know whether it is admitte or not. Whether reasonable time is given or not, I am trying to do my best.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಕಾರ್-ಅಟೆನ್‌ಷನ್ ನೋಟೀಸ್‌ಗೆ ನ್ಯಾಯವಾಗಿ ಎಷ್ಟು ಕಾಲವನ್ನು ಗೊತ್ತುಮಾಡಿದ್ದೀರಿ, ಸ್ವಾಮಿ!